ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: https://kptcl.karnataka.gov.in/
ಮಿಂಚಂಚೆ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)

**ಸಂಖ್ಯೆ: ಕವಿಪ್ರನಿನಿ/ಬಿ16/3442/2008-09(3)**

-3 MAR 2022

ಅಧೀಕ್ಷಕ ಇಂಜನಿಯರ್(ವಿ),
ಪ್ರಸರಣ (ನಿರ್ವಹಣೆ), ಬೆಂ.ಮಕ್ಷೇ.ವ(ದಕ್ಷಿಣ),
ಕವಿಪ್ರನಿನಿ,
**ಬೆಂಗಳೂರು.**

ಮಾನ್ಯರೆ,

**ವಿಷಯ:** ಮನೆ ಬಾಡಿಗೆ ಭತ್ಯೆ ನೀಡುವ ಬಗ್ಗೆ.
**ಉಲ್ಲೇಖ:** ತಮ್ಮ ಕಚೇರಿಯ ಪತ್ರ ಸಂಖ್ಯೆ: ಅ.ಇಂ(ವಿ)/ಪ್ರ(ನಿ)/ಬೆಂ.ಮ.ಕ್ಷೇ.ವ/ಉಲೆನಿ/ಹಿಸ/ಕ-4/12035-36.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಿಗಮದ ನೌಕರರನ್ನು ಸ್ವಂತ ಕೋರಿಕೆಯ ಮೇಲೆ ನಿಯೋಜನೆ ಮೇರೆಗೆ ವರ್ಗಾವಣೆ ಮಾಡಿದಾಗ ಹುದ್ದೆಯ ಮೇಲಿನ ಹಕ್ಕಿರುವ ಸ್ಥಳದಲ್ಲಿನ ಮನೆ ಬಾಡಿಗೆ ಭತ್ಯೆ ನೀಡಬೇಕೇ ಅಥವಾ ನಿಯೋಜನೆಗೊಂಡ ಸ್ಥಳಕ್ಕೆ ಅನುಗುಣವಾಗಿ ಮನೆ ಬಾಡಿಗೆ ಭತ್ಯೆ ನೀಡಬೇಕೇ ಎಂಬುದರ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಉಲ್ಲೇಖದ ಪತ್ರದಲ್ಲಿ ಕೋರಿರುತ್ತೀರಿ.

ನೌಕರರನ್ನು ಸ್ವಂತ ಕೋರಿಕೆಯ ಮೇರೆಗೆ ನಿಯೋಜನೆಗೊಳಿಸಲು ನಿಗಮದ ನಿಯಮಾವಳಿಗಳಲ್ಲಿ ನಿರ್ದಿಷ್ಟವಾದ ಅವಕಾಶವನ್ನು ಕಲ್ಪಿಸಿರುವುದಿಲ್ಲ. ಇಂತಹ ನಿಯೋಜನೆಯನ್ನು ನೌಕರನ ಹಿತಾಸಕ್ತಿಯಿಂದ ಮಾಡಲಾಗಿರುತ್ತದೆ. ಆದುದರಿಂದ, ಇಂತಹ ಪ್ರಕರಣಗಳಲ್ಲಿ ನಿಗಮದ ಮೇಲೆ ಯಾವುದೇ ಆರ್ಥಿಕ ಹೊರೆ ಉಂಟಾಗದಂತೆ ಎಚ್ಚರಿಕೆ ವಹಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ, ಸ್ವಂತ ಕೋರಿಕೆಯ ಮೇಲೆ ನಿಯೋಜನೆ ಮೇರೆಗೆ ವರ್ಗಾವಣೆಗೊಂಡಿರುವ ನೌಕರರಿಗೆ ಮನೆ ಬಾಡಿಗೆ ಭತ್ಯೆಯನ್ನು ಪಾವತಿಸುವ ವಿಷಯದಲ್ಲಿ, ಹುದ್ದೆಯ ಮೇಲೆ ಹಕ್ಕು ಹೊಂದಿರುವ ಸ್ಥಳ ಹಾಗೂ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಸ್ಥಳಗಳಲ್ಲಿ ನೀಡಲಾಗುತ್ತಿರುವ ಮನೆ ಬಾಡಿಗೆ ಭತ್ಯೆಯ ದರಗಳನ್ನು ಪರಿಶೀಲಿಸಿ, ನಿಗಮಕ್ಕೆ ಆರ್ಥಿಕ ಹೊರೆ ಉಂಟಾಗದಂತೆ ಇವೆರಡರಲ್ಲಿ ಯಾವುದು ಕಡಿಮೆಯೋ ಆ ದರದ ಮನೆ ಬಾಡಿಗೆ ಭತ್ಯೆಯನ್ನು ಪಾವತಿಸುವಂತೆ ಸ್ಪಷ್ಟೀಕರಿಸಲಾಗಿದೆ.

ವಿಭಾಗ/ವೃತ್ತ ಕಚೇರಿಗಳಿಂದ ಸಷ್ಟೀಕರಣ ಅಥವಾ ಅನುಮೋದನೆ ನೀಡುವಂತೆ ಕೋರಿ ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ ನೇರವಾಗಿ ಪತ್ರ ವ್ಯವಹಾರ ಮಾಡದಂತೆ ನಿಗಮದ ದಿನಾಂಕ: 28.11.2019 ರ ಸುತ್ತೋಲೆಯಲ್ಲಿ ತಿಳಿಸಲಾಗಿದ್ದರೂ, ತಮ್ಮ ವೃತ್ತ ಕಚೇರಿಯಿಂದ ನೇರವಾಗಿ ನಿಗಮ ಕಾರ್ಯಾಲಯಕ್ಕೆ ಪತ್ರ ವ್ಯವಹಾರ ಮಾಡುತ್ತಿರುವುದು ವಿಷಾಯದನೀಯ. ಆದ್ದರಿಂದ, ಇನ್ನು ಮುಂದೆ ಸ್ಪಷ್ಟೀಕರಣ/ಅನುಮೋದನೆ ವಿಷಯದಲ್ಲಿ ನೇರವಾಗಿ ನಿಗಮ ಕಾರ್ಯಾಲಯಕ್ಕೆ

ಪತ್ರ ವ್ಯವಹಾರವನ್ನು ಮಾಡದೇ, ನಿಗಮದ ದಿನಾಂಕ: 28.11.2019 ರ ಸುತ್ತೋಲೆಯನ್ವಯ ಮುಖ್ಯ ಇಂಜಿನಿಯರ್(ವಿ), ಬೆಂಗಳೂರು ಪ್ರಸರಣ ವಲಯ, ಕಚೇರಿಯ ಮುಖಾಂತರ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)

**ಪ್ರತಿಯನ್ನು:**

1. ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಕವಿಪ್ರನಿನಿ, ತುಮಕೂರು/ಮೈಸೂರು/ಹಾಸನ/ಬಾಗಲಕೋಟೆ/ಕಲಬುರಗಿ.
2. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ನಿಯಂತ್ರಣಾಧಿಕಾರಿ, ಕವಿಪ್ರನಿನಿ.
3. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಉಪಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ.